2. ಪ್ರಮಾಣ ವಚನ ಸ್ವೀಕಾರ

ಶ್ರೀ ರೋಜರ್ ಮೈಕೇಲ್ ಬಿನ್ನಿ (ನಾಮ ನಿರ್ದೇಶಿತ ಸದಸ್ಯರು):

(ಆಂಗ್ಲ ಭಾಷೆಯಲ್ಲಿ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು)

3. ನಿಲುವಳಿ ಸೂಚನೆ ಮಂಡನೆಗೆ ಒತ್ತಾಯ

(ಅ) ತೆಂಗಿನ ಮರಗಳಿಗೆ ತಗುಲಿರುವ ನುಸಿರೋಗ ಕುರಿತು.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೇ, ತಾವು ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ , ನಾನು, ಶ್ರೀಮಾನ್ ಭೈರೇಗೌಡರು, ಸೋಮಶೇಖರ್‌ರವರು, ಮಲ್ಲಿಕಾರ್ಜುನ್‌ರವರು, ಬಚ್ಚೇಗೌಡರು ಸೇರಿ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಅದನ್ನು ತಾವು ಗಮನ ಸೆಳೆಯವ ಸೂಚನೆಯಲ್ಲಿ ತೆಗೆದುಕೊಳ್ಳುತ್ತೇವೆ ಎಂಬ ಆದೇಶವನ್ನು ಕೊಟ್ಟಿದ್ದೀರಿ. ಆಡಳಿತ ಪಕ್ಷದ ಸದಸ್ಯರಾದ ಮಾನ್ಯ ರಾಜುಗೌಡರು ಕೂಡ ಈ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡು ವಿಷಯವನ್ನು ಪ್ರಸ್ತಾಪಿಸಲು ತಮ್ಮ ಅಪ್ಪಣೆಯನ್ನು ಕೋರಿದ್ದಾರೆ. ತಮ್ಮ ಆದೇಶದ ಪ್ರಕಾರ ಗಮನ ಸೆಳೆಯುವ ಸೂಚನೆಯನ್ನು ಅಳವಡಿಸಿಕೊಂಡು ಇಲ್ಲಿ ವಿಷಯ ಪ್ರಸ್ತಾಪನೆಯನ್ನು ಮಾಡಲು, ಯಾರು ಅದಕ್ಕೆ ಸಹಿ ಹಾಕಿದ್ದಾರೋ ಅವರುಗಳು ಮಾತ್ರ ಮಾತನಾಡಬಹುದು, ನಾವ್ಯಾರೂ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ತಮ್ಮ ಕೂಡಿಯಲ್ಲಿ ಮಾತನಾಡಿ ತಮಗೆ ಮನವರಿಕೆಯಾಗುವಂತೆ ಕೆಲವು ವಿಷಯಗಳನ್ನು ಹೇಳಿಕೊಂಡಿದ್ದೇನೆ. ಸರಕಾರವು ರಾಜ್ಯದಲ್ಲಿರತಕ್ಕಂಥ ಸುಮಾರು ಹತ್ತು ಲಕ್ಷ ಎಕರೆ ಜಮೀನಿನಲ್ಲೇ ಸುಮಾರು ಏಳುಕೋಟಿಗೂ ಅಧಿಕ ಇರತಕ್ಕಂಥ ತೆಂಗಿನ ಮರಗಳಿಗೆ ತಗುಲಿದ ನುಸಿ ರೋಗಕ್ಕೆ....

-ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಪ್ರಶ್ನೋತ್ತರವಾದ ಮೇಲೆ ಈ ವಿಚಾರವನ್ನು ತಾವುಗಳು ಪ್ರಸ್ತಾಪಿಸಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಿಲುವಳಿ ಸೂಚನೆಯ ಬಗ್ಗೆ ಹೇಳತಕ್ಕಂಥ ಹಕ್ಕು ನಮಗೆ ಇದೆ. ಮಾನ್ಯ ಚಂದ್ರೇಗೌಡರು, ಹೆಚ್.ಕೆ.ಪಾಟೀಲರು ಈ ಕಡೆಯಲ್ಲಿ ಕುಳಿತುಕೊಂಡು ಏನು ಮಾಡುತ್ತಿದ್ದರೋ ಅದನ್ನೇ ನಾವು ಮಾಡುತ್ತಾ ಇದ್ದೇವೆ. ಅದನ್ನು ಬಿಟ್ಟು ಬೇರೆ ಏನನ್ನೂ ಮಾಡುವುದಕ್ಕೆ ಹೋಗಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ಆದರೆ ಇದು ಸಂಪ್ರದಾಯವಲ್ಲ...

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸಂಪ್ರದಾಯದ ಬಗ್ಗೆ ಹೇಳುವುದಾದರೆ, ಆ ಕುರಿತು ನೀವು ಏನು ಸಂಪ್ರದಾಯವನ್ನು ಹಾಕಿಕೊಟ್ಟಿದ್ದೀರೋ, ಉಪನಾಯಕನಾಗಿ ಅದನ್ನು ನಾನು ಮುಂದುವರಿಸಿಕೊಂಡು ಬರುತ್ತಿದ್ದೇನೆ. ನನ್ನ ದುರಾದೃಷ್ಟಕ್ಕೆ ನನಗೆ ಇಬ್ಬರು ನಾಯಕರುಗಳು. ನೀವು ಮತ್ತು ಮಾನ್ಯ ದೇಶಪಾಂಡೆಯವರು. ನಿಮ್ಮಿಬ್ಬರ ಕೈಕೆಳಗೆ ನಾನು ಉಪ-ನಾಯಕನಾಗಿ ಕೆಲಸ ಮಾಡಿದ್ದೇನೆ. ಈಗ ನಮ್ಮನ್ನು ಬಿಟ್ಟು ಆ ಕಡೆಗೆ ನೀವು ಹೊರಟು ಹೋಗಿದ್ದೀರಿ. ಈಗ ನಾವೇನು ಮಾಡುವುದಕ್ಕಾಗುತ್ತದೆ?

ಶ್ರೀ ಡಿ.ಬಿ.ಚಂದ್ರೇಗೌಡ: ನಿಮಗೆ ಕೂಡ ಸ್ವಾಗತವಿದೆ....

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾವು ಹೋಗಬೇಕಾಗಿಲ್ಲ, ಅವರೇ ವಾಪಸ್ಸು ಬರುತ್ತಾರೆ...

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಮಗೂ ಸ್ವಾಗತವಿದೆ, ಯೋಚನೆ ಮಾಡಿ....

(ನಗು)

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಹತ್ತು ಲಕ್ಷ ಎಕರೆ ಪ್ರದೇಶದಲ್ಲಿ ಸುಮಾರು 8 ಕೋಟಿ ತೆಂಗಿನ ಮರಗಳು ಇವೆ. ಈ ಮರಗಳಿಗೆ ನುಸಿ ರೋಗ ತಗಲಿದ್ದು, ಅದರ ನಿವಾರಣೆಗಾಗಿ ಸರಕಾರದವರು ಕೊಟ್ಟ ಎಲ್ಲಾ ಭರವಸೆಗಳು ಹುಸಿಯಾಗಿವೆ. ಇದರ ಬಗ್ಗೆ ಏನಾದರೂ ಮಾಡಲೇಬೇಕಾಗುತ್ತದೆ. ಇಲ್ಲಿ ರಾಜಕೀಯವನ್ನು ಬೆರಸಲು ನಾವು ತಯಾರಾಗಿಲ್ಲ. ಇದು ಬಹಳ ಮಹತ್ತರವಾಗಿರತಕ್ಕಂಥ ವಿಚಾರವಾಗಿದೆ. ಸುಮಾರು 500ಕೋಟಿ ರೂಪಾಯಿ ಉತ್ಪಾದನೆ ನಮ್ಮ ರೈತರಿಗೆ ಇದರಿಂದ ಬರುತ್ತಿದೆ. ಇಡೀ ರಾಷ್ಟ್ರದಲ್ಲಿ ನಾವು ತೆಂಗು ಬೆಳೆಯಲ್ಲಿ ಮೂರನೇ ಸ್ಥಾನದಲ್ಲಿದ್ದೇವೆ. ಹೀಗೆ ಮುಂದುವರಿದರೆ ನಾವು ಬಹಳ ಕೆಳಗಡೆಗೆ ಹೊರಟು ಹೋಗಬೇಕಾಗುತ್ತದೆ. ಇದಕ್ಕೆ ನಾಲ್ಕೈದು ವರ್ಷಗಳಲ್ಲಿ ಸುಮಾರು ನೂರು ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಾ ಇದ್ದೇವೆ. ಕೇಂದ್ರ ಸರಕಾರದ ತೆಂಗಿನ ಮಂಡಳಿ ಕೂಡ ಯಾವುದೇ ರಾಜ್ಯದ ತೆಂಗುದು ಕೃಷಿಗೆ ಯಾವುದೇ ಈ ರೀತಿಯ ಸಹಾಯವನ್ನು ಕೊಡಲು ಮುಂದೆ ಬಂದಿಲ್ಲ ಎಂಬುದು ದುರ್ದೈವದ ವಿಚಾರ.

ಅಧ್ಯಕ್ಷರು: ತಾವುಗಳು ಮಾತನಾಡಬಹುದು. ಅದು ಯಾವ ರೂಲ್ ಪ್ರಕಾರ ಎಂಬುದನ್ನು ನಾನು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಲೋಕಸಭಾ ಸದಸ್ಯರುಗಳು ಸ್ವಲ್ಪ ಸಹಾಯ ಮಾಡಿದ್ದರೂ

ಅದರಿಂದ ಯಾವ ಉಪಯೋಗವಾಗಿಲ್ಲ. ಆದ್ದರಿಂದ ಇದರ ಬಗ್ಗೆ ಬಹಳ ದೀರ್ಘವಾಗಿ ಚರ್ಚೆ ಆಗಬೇಕಾಗುತ್ತದೆ. ಕೇವಲ ಗಮನ ಸೆಳೆಯುವ ಸೂಚನೆಯ ಮೂಲಕ ಎಲ್ಲಾ ವಿಚಾರಗಳನ್ನು ಪ್ರಸ್ತಾಪಿಸಲು ಸಾಧ್ಯವಾಗಲಾರದು. ಸದನದಲ್ಲಿ ಇರತಕ್ಕಂಥವರೆಲ್ಲರೂ ರೈತರ ಮಕ್ಕಳೆ. ಈಗ ತೆಂಗು ಬೆಳೆಗೆ ಒಂದು ದೊಡ್ಡ ಪಿಡುಗು ಬಂದಿದೆ. ಸಿಡುಬು ರೋಗಕ್ಕಿಂತಲೂ ದೊಡ್ಡ ರೋಗ ಇದು. ಇದರ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ. ಅದಕ್ಕೋಸ್ಕರವಾಗಿ ನಮಗೆ ಅವಕಾಶವನ್ನು ಮಾಡಿಕೊಡಬೇಕು. ಪ್ರಶ್ನೋತ್ತರಗಳನ್ನು ಬದಿಗೊತ್ತಿ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಕಡೆಯಿಂದ ಮಾನ್ಯ ಭೈರೇಗೌಡರು, ಸೋಮಶೇಖರವರು, ಬಚ್ಚೇಗೌಡರು ಮಾತನಾಡುತ್ತಾರೆ. ದಯವಿಟ್ಟು ಅವಕಾಶ ಮಾಡಿಕೊಡಬೇಕು. ಹಾಗೆಯೇ ಈ ಮೂಲಕ ತಮ್ಮ ಮನಸ್ಸನ್ನು ಈ ವಿಚಾರವಾಗಿ ಒಲಿಸಿಕೊಳ್ಳಲು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಇದರ ಬಗ್ಗೆ ಈಗಾಗಲೇ ಮಾನ್ಯ ರಾಜೂಗೌಡರು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದಾರೆ. ಅದು ಅಡ್ಮಿಟ್ ಆಗಿದ್ದು ಉತ್ತರ ಕೂಡ ಬಂದಿದೆ. ಆ ಸಂದರ್ಭದಲ್ಲಿ ಎಲ್ಲಾ ಪಕ್ಷದವರೂ ಮಾತನಾಡಬಹುದು, ಅದಕ್ಕೆ ನನ್ನ ಅಭ್ಯಂತರವಿಲ್ಲ. ಇದು ಪ್ರಾಮುಖ್ಯವಾದ ವಿಚಾರ.

ಶ್ರೀ ಬಿ.ಸೋಮಶೇಖರ್: ಮಾನ್ಯ ಸಭಾಧ್ಯಕ್ಷರೇ, ಆಡಳಿತ ಪಕ್ಷದ ಸದಸ್ಯರು ಈ ವಿಚಾರವನ್ನು ಗಮನಸೆಳೆಯುವ ಸೂಚನೆಯ ಮುಖಾಂತರ ತಂದಿದ್ದಾರೆ. ರೈತರುಗಳ ಕೋಟ್ಯಾಂತರ ರೂಪಾಯಿಗಳ ಬೆಳೆ ನಷ್ಟವಾಗುವ ಈ ವಿಚಾರದಲ್ಲಿ ನಾವು ವಿರೋಧ ಪಕ್ಷದವರಾಗಿ ಚರ್ಚೆ ಮಾಡಿ ಸರಕಾರದ ಗಮನಕ್ಕೆ ವಿಷಯವನ್ನು ತರಬೇಕಾಗಿದೆ.

ಅಧ್ಯಕ್ಷರು: ಮಾನ್ಯ ರಾಜುಗೌಡರು ಮೊದಲೇ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದರಿಂದ ಅದನ್ನು ಅಡ್ಮಿಟ್ ಮಾಡಿ ಉತ್ತರವನ್ನು ತರಿಸಿಕೊಂಡಿದ್ದೇವೆ. ತಾವುಗಳು ಕೂಡ ಆ ಪ್ರಸ್ತಾವನೆಯಲ್ಲಿ ಮಾತನಾಡಬಹುದು. ನಿಮಗೆ ಮಾತಾಡಲು ಎಷ್ಟು ಸಮಯ ಬೇಕೋ ಅಷ್ಟು ಕೊಡುತ್ತೇವೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ ತಾವುಗಳು ಕೂಡ ರೈತರು. ತಾವು ಈ ವಿಚಾರವನ್ನು ಗಮನ ಸೆಳೆಯುವ ಸೂಚನೆಯಾಗಿ ತೆಗೆದುಕೊಂಡರೆ ವಿಚಾರವನ್ನು ಡೈಲ್ಯೂಟ್ ಮಾಡಿದ ಹಾಗೆ ಆಗುತ್ತದೆ.

ಅಧ್ಯಕ್ಷರು: ಗಮನಸೆಳೆಯುವ ಸೂಚನೆಯಡಿಯಲ್ಲಿ ತಾವುಗಳು ಮಾತನಾಡಿ. ಇದರಲ್ಲಿ ಒಂದು ಗಂಟೆಗೂ ಅಧಿಕ ಸಮಯ ಚರ್ಚೆಯಾದ ಬೇಕಾದಷ್ಟು ಉದಾಹರಣೆಗಳು ಇವೆ. ಆದ್ದರಿಂದ ನಿಲುವಳಿ ಸೂಚನೆ ಪ್ರಸ್ತಾವ ಬೇಡ.

ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಆ ಕುರಿತು ಮಾತನಾಡಬಹುದು. ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ.

(ಆ) ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕು ಸುದ್ಗುಟ್ಟಿ ಗ್ರಾಮದಲ್ಲಿ ನಡೆದ ಘಟನೆ ಕುರಿತು.

ಶ್ರೀ ಬಿ.ಹೆಚ್.ಬನ್ನಿಕೋಡ್ (ಹಿರೇಕೆರೂರು): ಅಧ್ಯಕ್ಷರೇ, ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕು ಸುದ್ಗಟ್ಟಿ ಎಂಬ ಗ್ರಾಮದಲ್ಲಿ 19ನೇ ತಾರೀಖಿನಿಂದ ಒಂದು ಘಟನೆ ನಡೆದು ಅದರಲ್ಲಿ ಒಬ್ಬರ ಕೊಲೆಯಾಗಿದೆ. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ನಿನ್ನೆ ತಮಗೆ ನಿಲುವಳಿ ಸೂಚನೆ ಕಳಿಸಿದ್ದೆನು. ಇವತ್ತು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಅದನ್ನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತಿಸಲಾಗಿದೆ. ಎಲ್ಲವನ್ನೂ ನಿಲುವಳಿ ಸೂಚನೆ ತೆಗೆದುಕೊಳ್ಳಲು ಆಗುವುದಿಲ್ಲ. ಅದನ್ನು ಗೃಹ ಸಚಿವರಿಗೆ ಕಳಿಸಿದ್ದೇವೆ, ಅವರಿಂದ ಉತ್ತರ ಬಂದ ತಕ್ಷಣ ನೀವು ಗಮನ ಸೆಳೆಯುವ ಸೂಚನೆಯಡಿ ಕೇಳಬಹುದು.

(4) ಪ್ರಕಟಣೆ

ಅಧ್ಯಕ್ಷರು: ದಿನಾಂಕ 20-3-2000ದಂದು ಜಾರಿಗೆ ಬರುವಂತೆ ವಿಧಾನಸಭೆಯ ಸದಸ್ಯರಾದ ಶ್ರೀ ಸಿ.ಎಸ್.ನಾಡಗೌಡ ಅಪ್ಪಾಜಿ ಅವರನ್ನು ವಿಧಾನಸಭೆಯ ಸರ್ಕಾರಿ ಮುಖ್ಯ ಸಚೇತಕರನ್ನಾಗಿ ನೇಮಿಸಲಾಗಿರುತ್ತದೆ.

(5) ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎ.ರಾಮದಾಸ್: ಅಧ್ಯಕ್ಷರೇ, ನಿನ್ನೆ ತಾನೇ ತಾವು ಒಂದು ವಿಚಾರ ಹೇಳಿದಿರಿ. ಯಾವುದೇ ಸಚಿವರು ಸಹಿ ಮಾಡದೆ ಪ್ರಶ್ನೆಗೆ ಎಂದು ಉತ್ತರ ಕೊಟ್ಟಿದ್ದಾರೆ, ಅದು ಆಗಬಾರದು. ಮಂತ್ರಿಗಳು ಸಹಿ ಮಾಡಿಯೇ ಕೊಡಬೇಕೆಂದು ಹೇಳಿದಿರಿ ಆದರೆ